1089 ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರ ಸಂಘಗಳು ಎಷ್ಟು; ಇದರಲ್ಲಿ ಸೇವೆ ಸಲ್ಲಿಸುವವರ ಸಂಖ್ಯೆ ಎಷ್ಟು? (ವ್ಯಂದವಾರು ವಿವರ ಒದಗಿಸುವುದು)

ಆ) ಸಹಕಾರ ಸಂಘಗಳ ಉಪ ನಿಬಂಧಕರ ನ್ಯಾಯಾಲಯಗಳಲ್ಲಿ ನಿರ್ದೇಶಕರುಗಳ ಆಯ್ಕೆಗೆ ಸಂಬಂಧಿಸಿದ ಇನ್ನೂ ಇತ್ಯರ್ಥವಾಗದ ಅರ್ಜಿಗಳೆಷ್ಟು;

ಇ) ಹಾಗಿದ್ದಲ್ಲಿ, ನಿರ್ದೇಶಕರುಗಳ ಅವಧಿ ಮುಗಿಯುತ್ತಿದ್ದರೂ ಪ್ರಕರಣಗಳು ವಿಲೇವಾರಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇವುಗಳನ್ನು ಬಗೆಹರಿಸಲು ಸರ್ಕಾರದ ಕ್ರಮವೇನು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ ದಿನಾಂಕ 31–3–2009ಕ್ಕೆ ಒಟ್ಟು 34025 ಸಹಕಾರ ಸಂಘಗಳಿರುತ್ತವೆ. ಇವುಗಳಲ್ಲಿ ಸುಮಾರು 1,17,438 ನೌಕರರು ಸೇವೆ ಸಲ್ಲಿಸುತ್ತಿದ್ದಾರೆ.

ಆ) ಇತ್ಯರ್ಥವಾಗದ ಅರ್ಜಿಗಳ ಸಂಖ್ಯೆ 19

ಇ) ಅಂತಹ ಪ್ರಕರಣಗಳು ವಿಲೇವಾರಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.

1121 ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾಗತೀಕರಣದ ಹಿನ್ನೆಲೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಸಾಗಣೆ ಹೆಚ್ಚಾಗಿದ್ದು, ಇತ್ತೀಚಿನ ವರದಿ ಪ್ರಕಾರ 2006ರಲ್ಲಿ ಬೆಂಗಳೂರು ನಗರದಲ್ಲಿ ಸುಮಾರು 2000ಕ್ಕೂ ಹೆಚ್ಚು ಮಕ್ಕಳು ಕಾಣೆಯಾಗಿದ್ದು, ಆ ಪೈಕಿ ಅನೇಕ ಮಕ್ಕಳು ಮತ್ತು ಮಹಿಳೆಯರು ಅನೈತಿಕ ಸಾಗಣೆಗೆ ಗುರಿಯಾಗಿರುವುದು ನಿಜವೇ;

ಆ) ಇತ್ತೀಚಿನ ವರದಿಯಂತೆ ಕರ್ನಾಟಕವು ಮಹಿಳಾ ಮತ್ತು ಮಕ್ಕಳ ಸಾಗಣೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;